ಶ್ರೀ ಎಂ. ಚಂದ್ರಶೇಖರ್.—೧೯೮೦-೮೧ನೇ ಸಾಲಿಗೆ, ೧೯೬೪ನೇ ಇಸವಿಯಲ್ಲಿ ಸೇರ್ಪಡೆಯಾಗಿರತಕ್ಕ ಹಳ್ಳಿಗಳ ಅಭಿವೃದ್ಧಿಗಾಗಿ ೧ ಕೋಟಿ ೩೮ ಲಕ್ಷ ರೂಪಾಯಿಗಳನ್ನು ಅನುದಾನವಾಗಿ ಇತ್ತಿದ್ದು, ಆದರೆ ಇದುವರೆವಿಗೂ ಆ ಬಾಬತ್ತಿನಲ್ಲಿ ಕಾರ್ಪೊರೇಷನ್‌ನವರು ಸರ್ಕಾರದಿಂದ ಹಣವನ್ನು ಪಡೆದಿರುವುದಕ್ಕೆ ಮಾಹಿತಿ ಇದೆಯೇ ?

ಶ್ರೀ ಧರ್ಮಸಿಂಗ್.—೧೯೬೪ರಲ್ಲಿ ಸೇರ್ಪಡೆಯಾದಂತಹ ೩೩ ಹಳ್ಳಿಗಳು ಹಾಗೂ ೨೯ ಹ್ಯಾಮ್ಲೆಟ್ಸ್ ಬಗ್ಗೆ ಕೇಳಿದ್ದಾರೆ. ಸರ್ಕಾರ ಇದಕ್ಕೆ ೧.೩೬ ಕೋಟಿ ರೂ.ಮಂಜೂರು ಮಾಡಿದೆ. ಇದರಲ್ಲಿ ೫೭ ಲಕ್ಷ ರೂಪಾಯಿಗಳಿಗೆ ಅಂದಾಜು ಬಂದಿದೆ. ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಈ ಕೆಲಸವನ್ನು ಕೈಗೊಂಡಿದ್ದು ಅದು ಮುಂದುವರೆಯುತ್ತಿದೆ,

ಶ್ರೀ ಎಂ. ಚಂದ್ರಶೇಖರ್.—ಇನ್ನು ಮಿಕ್ಕ ಹಣವನ್ನು ಬೇರೆ ಕೆಲಸಗಳಿಗಾಗಿ ಕೊಟ್ಟಂತ ಹದ್ದಾಗಿದೆ. ಬೇರೆ ಕೆಲಸಗಳು ಎಂದರೆ ಈ ಒಂದು ಸೇರಲ್ಪಟ್ಟ ಹಳ್ಳಿಗಳಿಗೆ ಸಂಬಂಧಪಟ್ಟಂತೆ ಮಾತ್ರ ರಸ್ತೆಗಳು, ಒಳಚರಂಡಿ ವ್ಯವಸ್ಥೆ ಚಿಪ್‌ಕಾರ್ಪೆಟಿಂಗ್ ಕೆಲಸಗಳು ಅನೇಕ ಏನಿವೆ ಅವಕ್ಕೆ ಈ ೧೩೬ ಲಕ್ಷದಲ್ಲಿ ೫೭ ಲಕ್ಷ ಹೋದರೆ ಬಾಕಿ ಹಣ ಏನಿದೆ ಅದನ್ನು ಕೂಡಲೇ ಒದಗಿಸಿ ಈ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್. – ನನಗೆ ತಿಳಿದ ಪ್ರಕಾರ ಹೇಗೆ ಎಸ್ಟಿಮೇಟ್ ಬರುತ್ತದೆ ಹಾಗೆ ಕಾರ್ಪೊರೇಷನ್‌ನಲ್ಲಿ ಹಣವನ್ನು ಒದಗಿಸಬೇಕಾಗುತ್ತದೆ. ಅದರಲ್ಲೇನೂ ತಾಪತ್ರಯ ಇಲ್ಲ.

ಶ್ರೀ ಐ. ಪಿ. ಡಿ. ಸಾಲಪ್ಪ.—ಪ್ರತಿ ವರ್ಷ ಒದಗಿಸುವ ಹಣವನ್ನು ಕಾರ್ಪೊರೇಷನ್ನಿನವರು ಆಯಾಯ ವರ್ಷದ ಕೆಲಸ ಮಾಡದೇ ಆ ಕೆಲಸಗಳನ್ನು ಮುಂದುವರಿಸುತ್ತಾರೆ. ಬಜೆಟ್‌ನಲ್ಲಿ ಇಟ್ಟಿರುವ ಹಣ ಲ್ಯಾಪ್ಸ್ ಆಗುವುದಿಲ್ಲವೆಂದು ಹೇಳಿದ್ದಾರೆ. ಸ್ಪಿಲ್ ಓವರ್ ವರ್ಕ್ಸ್ ಎಂದು ಮಾಡಿಬಿಟ್ಟು ಮುಂದಿನ ವರ್ಷದ ಹಣವನ್ನು ಅದಕ್ಕೆ ಖರ್ಚು ಮಾಡಿ ಈ ವರ್ಷದ ಹಣವನ್ನು ಏನು ಮಾಡುತ್ತಾರೋ ನನಗೆ ಅರ್ಥವಾಗುತ್ತಾ ಇಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಕಛೇರಿಗೆ ಹೋಗಿ ವಿಚಾರಿಸಿ ಮಾಡಲಿ. ಪ್ರತಿವರ್ಷವೂ ಆಯಾ ವರ್ಷದ ಕೆಲಸವನ್ನು ಮಾಡದೇ ಮುಂದಿನ ವರ್ಷಕ್ಕೆ ಹಾಕುವುದಕ್ಕೆ ಏನು ಸ್ಪಾಫ್ ಇಲ್ಲವೇ ? ಹಣ ಇಲ್ಲವೇ ? ಇಲ್ಲ ಮಾಡತಕ್ಕ ಮೆಷನರಿ ಇಲ್ಲವೇ ? ಇಲ್ಲ ಮಾಡುವುದಕ್ಕೆ ಮನಸ್ಸು ಇಲ್ಲವೇ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಧರ್ಮಸಿಂಗ್.—ಮಾನ್ಯ ಸಾಲಪ್ಪನವರು ಅವರ ಅನುಭವದಿಂದ ಹೇಳುತ್ತಿದ್ದಾರೆ. ಈ ವರ್ಷ ಏನು ಸ್ಪಿಲ್ ಓವರ್ ವರ್ಕ್ಸ್ ಇದೆ ಅದನ್ನೆಲ್ಲಾ ಕಂಪ್ಲೀಟ್ ಮಾಡಬೇಕಾಗುತ್ತದೆ. ಹೊಸದಾಗಿ ಏನೇನು ಶಾಸಕರಿಂದ ಹಾಗೂ ಸಾರ್ವಜನಿಕರಿಂದ ಬೇಡಿಕೆಗಳು ಬಂದಿವೆ, ಆ ಕೆಲಸಗಳೆಲ್ಲಾ ಆಗಬೇಕಾಗಿವೆ. ಆ ಕೆಲಸಗಳಿಗೆ ಎಷ್ಟು ಹಣವನ್ನು ಒದಗಿಸುತ್ತೇವೆ ಅವನ್ನೂ ಖರ್ಚು ಮಾಡುತ್ತೇವೆ. ಮತ್ತು ೧೯೮೦-೮೧ರಲ್ಲಿ ಏನು ೫೪೨ ಲಕ್ಷ ರೂಪಾಯಿಯನ್ನು ಪ್ರೊವೈಡ್ ಮಾಡಿದ್ದೇವೆ ಅದನ್ನು ಕೂಡಾ ಖರ್ಚು ಮಾಡುತ್ತೇವೆ.

Sanction of Nutrition Food Programme in SC/ST areas.

630 SRI L.T. THIMMAPPA HEGDE (Sagar).—Will the Minister for Social Welfare and Backward Classes be pleased to state,—

(a) the number of areas accorded sanction under Nutrition Food Programme in urban areas and Scheduled Tribe development areas ;

(b) the number of persons benefited by this scheme. The details of urban and scheduled Tribe areas to which the scheme has been sanctioned but the programme has not been commenced(particulars to be furnished);

(c) whether any complaints have been received in respect of defects in this scheme. Is there any arrangement to inspect often and often?

SRI P. VENKATARAMANA (Minister for Social Welfare and Back ward Classes).—

(a) Nutrition Food Programme has been sanctioned in 79 urban and 38 Scheduled Tribes development areas.

(b) 3,34,326 people have been benefited out of this scheme. The particulars of urban and Scheduled Tribe areas for which the seheme has been sanctioned and programme has been commenced is as follows

	Urban area		S.T area
1	Korapura	1	Hosanagara
2	Shikaripura	2	Ballery taluk
3	Thalikote	3	Hukkeri taluk
4	Basavara Bagewadi	4	Gokak taluk
5	Kumta	5	Belgaum taluk
6	Athani	6	Sampagaon
7	Ankeswara	7	Hirekerur taluk
8	Bhatkal	8	Bangarpet taluk

c) Yes. As the Chief Executive Officer of the City Corporation or urban areas and Block Development officers for Scheculed Tribes areas are responsible for implementing the Special Nutrition Food Programme the complaints received in respect of this programme are being examined. In addition to this, 6 Special Nutrition Programme Inspectors are attending to the inspection works in this department. Whenever such complaints are received, the inspectors are being sent to such places.

ಶ್ರೀ ಎಲ್.ಟಿ. ತಿಮ್ಮಪ್ಪಹೆಗ್ಗಡೆ.—ತಾವು ತಮ್ಮ ಉತ್ತರದಲ್ಲಿ ''ಮಂಜೂರಾಗಿ ಕಾರ್ಯಕ್ರಮ ಪ್ರಾರಂಭಿಸಿದ ನಗರ'' ಎಂದಿದೆ. ಈ ಬಗ್ಗೆ ನನ್ನ ಪ್ರಶ್ನೆ ಏನೆಂದರೆ ಇವು ಮಂಜೂರಾತಿ ಪ್ರಾರಂಭಿಸಿದ್ದು ಪ್ರದೇಶಗಳೇ ಅಥವಾ ಮಂಜೂರಾಗಿ ಪ್ರಾರಂಭಿಸದೇ ಇರುವ ಪ್ರದೇಶಗಳೇ ಎಂದು ಸ್ಪಷ್ಟವಾಗಿ ಹೇಳಿ ಬೇಕು. ತಾವು ''ಪ್ರಾರಂಭಿಸಿದ'' ಎಂದು ಹೇಳುತ್ತಿದ್ದೀರಿ. ಇದರಲ್ಲಿ ಏನೋ ತಪ್ಪು ಇರಬಹ ದು. ೧೯೭೯ರಲ್ಲಿ ಮಂಜೂರಾದ ಏರಲ್ಲಿ ಪ್ರಾರಂಭ ಮಾಡಿದ್ದೇ ಅಥವಾ ಮಾಡದೇ ಇರುವುದೇ?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ.—ಮಾನ್ಯ ಸದಸ್ಯರು ಹೇಳಿದ್ದು ಸರಿ ಇದೆ. ''ಮಂಜೂರಾಗಿ ಪ್ರಾರಂಭಿಸಿದಂತಹ'' ಎಂದು ಅವರು ತಿದ್ದಿಕೊಳ್ಳಬೇಕು.

ಶ್ರೀ ಎಲ್.ಬಿ. ತಿಮ್ಮಪ್ಪಹೆಗ್ಗಡೆ.—ಈ ಪ್ರಶ್ನೆಯ (ಆ)ಗೆ ಉತ್ತರವಾಗಿ ಈ ಒಂದು ಪೌಷ್ಟಿಕ ಆಹಾರ ಯೋಜನೆ ೮ ನಗರ ಪ್ರದೇಶಗಳಿಗೂ ೮ ಗಿರಿಜನ ಪ್ರದೇಶಗಳಿಗೂ ಮಂಜೂರಾಗಿದೆ ಎಂದು ಹೇಳುತ್ತೀರಿ, ಆದರೆ ಇದರಲ್ಲಿ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಮಂಜೂರಾಗಿ ವರ್ಷಗಟ್ಟಲೆಯಾ

ದರೂ ಕೂಡ ಅಲ್ಲಿ ಈ ಯೋಜನೆಯ ಕೆಲಸವನ್ನು ಏತಕ್ಕೆ ಪ್ರಾರಂಭ ಮಾಡಲಿಲ್ಲಾ? ಇದಕ್ಕೆ ಕಾರಣ ತಿಳಿಸಬೇಕು ಎರಡನೆಯದಾಗಿ (ಇ)ಗೆ ಉತ್ತರವಾಗಿ ಇದರ ಬಗ್ಗೆ ದೂರಗಳು ಬಂದಿದೆ ಎಂದು ಹೇಳಿದ್ದೀರಿ, ಮತ್ತೆ ಮತ್ತೆ ಇದರ ಬಗ್ಗೆ ದೂರುಗಳು ಬರುತ್ತಾ ಇದೆ. ಆದುದರಿಂದ ಇದನ್ನು ಉತ್ತಮವಾಗಿ ಮಾಡುವುದಕ್ಕೆ ಆಗಾಗ್ಗೆ ತನಿಖೆ ನಡೆಯುತ್ತಿರಬೇಕು, ಮಾಡುತ್ತಾ ಇಲ್ಲ ಏತಕ್ಕಾಗಿ ಇದುವರೆಗೆ ತನಿಖೆ ವ್ಯವಸ್ಥೆ ಮಾಡಿಲ್ಲಾ ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ –ನಗರ ಪ್ರದೇಶಗಳಲ್ಲಿ ಎಲ್ಲೆಲ್ಲಿ ಈ ಯೋಜನೆ ನಡೆಯುತ್ತಾ ಇದೆ ಅನ್ನುವುದಕ್ಕೆ ಈ ಬಗ್ಗೆ ೮ ಹೆಸರುಗಳನ್ನು ಇದರಲ್ಲಿ ಕೊಟ್ಟಿದೆ. ತಮಗೆ ಹೇಳಬೇಕಾದರೆ ಈಗಾಗಲೇ ಷಹಾಪುರ ಷಿಕಾರಿಪುರ ಮತ್ತು ಅಥಣಿ ಈ ಮೂರು ಕಡೆಗಳಲ್ಲಿ ಷುರು ಮಾಡಿದ್ದೇವೆ. ಗಿರಿಜನ ಕ್ಷೇತ್ರ ದಲ್ಲಿ ಎಲ್ಲೆಲ್ಲಿ ನಡೆಯುತ್ತಾ ಇದೆ ಅನ್ನುವುದಕ್ಕೆ ಆ ೮ ಹೆಸರುಗಳನ್ನು ಕೂಡ ಕೊಟ್ಟಿದೆ, ಅದರಲ್ಲಿ ಹೊಸ ನಗರ ಮತ್ತು ಬೆಳಗಾಂ ಏರಿಯಾದಲ್ಲಿ ೯ನೇ ಮಾರ್ಚಿ ೧೯೮೧ರಲ್ಲಿ ಶುರುವಾಗಿದೆ. ಈ ಕೆಲಸ ತಡವಾಗಿ ರುವುದಕ್ಕೆ ಕಾರಣ ಏನೆಂದರೆ ನಾವು ಸ್ಯಾಂಕ್ಷನ್ ಮಾಡಿದ ಮೇಲೆ ಅಲ್ಲಿನ ಮುನಿಸಿಪಾಲಿಟಿಯವರಾಗಲಿ ಅಥವಾ ಬಿಡಿಓ ಆಗಲಿ ಸರ್ವೆ ಮಾಡಿ ಈ ಬೆನಿಫಿಷಿಯರೀಸ್‌ನಿಂದ ಎಷ್ಟು ಜನ ಮಕ್ಕಳಿಗೆ ಅನುಕೂಲವಾಗುತ್ತದೆ ಅಂದರೆ ಆರು ವರ್ಷದೊಳಗೆ ಇರತಕ್ಕಂಥಾ ಮಕ್ಕಳು ಎಷ್ಟು ಇದ್ದಾರೆ ಮತ್ತು ಈ ಯೋಜನೆ ಎಲ್ಲಿಯ ವರೆಗೆ ವಿಸ್ತರಿಸಬೇಕು ಅನ್ನುವುದರ ಬಗ್ಗೆ ಒಂದು ರಿಪೋರ್ಟ್ ಕಳಿಸಬೇಕು. ಅನಂತರ ಬ್ರೆಡ್‌ಗೆ ಟೆಂಡರ್ ಕರೆದು ಅವರಿಗೆಲ್ಲಾ ಸಪ್ಲೈ ಮಾಡುವುದಕ್ಕೆ ಏರ್ಪಾಡು ಮಾಡಬೇಕಾಗುತ್ತದೆ ದೊಡ್ಡ ದೊಡ್ಡ ಪಟ್ಟಣ ಗಳಿಗಾದರೆ ಮಾಡ್ರನ್ ಬೇಕರಿಯಿಂದ ಬ್ರೆಡ್ ಅನ್ನು ಖರೀದಿ ಮಾಡುತ್ತೇವೆ. ಸಣ್ಣ ಸಣ್ಣ ಊರುಗಳಿಗಾದರೆ ಈ ಬ್ರೆಡ್ ಸಪ್ಲೈ ಮಾಡುವುದಕ್ಕೆ ಟೆಂಡರ್ ತೆಗೆದುಕೊಂಡು ಕೆಲಸ ಶುರು ಮಾಡಬೇಕಾಗುತ್ತದೆ ಹೀಗೆ ಮಾಡಬೇಕಾದರೆ ಇದಕ್ಕೆ ಸ್ವಲ್ಪ ದಿವಸ ತಡವಾಗುತ್ತದೆ. ಇದರಿಂದಾಗಿ ಕೆಲವು ಕಡೆ ಸಪ್ಲೈ ಮಾಡಲು ತಡವಾಗಿದೆ. ಮತ್ತು ಕೆಲವು ಕಡೆ ತಡವಾಗಿರುವ ಬಗ್ಗೆ ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ಆದಷ್ಟು ಜಾಗ್ರತೆ ಎಲ್ಲಿ ಈ ಕೇಸು ಆಗಬೇಕೋ ಅಂಥಾ ಕಡೆ ಶುರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಲ್.ಟಿ. ತಿಮ್ಮಪ್ಪಹೆಗ್ಗಡೆ. ನಾನು ಹೇಳುವುದು ಇಷ್ಟೆ. ಎಲ್ಲೋ ನಿಮ್ಮ ಕಾರ್ಯಕ್ರಮ ದಲ್ಲಿ ಸ್ವಲ್ಪ ತಪ್ಪು ಇರಬೇಕು ಅಂತ ನನಗೆ ಕಾಣುತ್ತದೆ. ಏತಕ್ಕೆಂದರೆ ಈ ಬಗ್ಗೆ ಸಾಗರದ ವಿಚಾರ ವನ್ನು ಪ್ರಸ್ತಾಪ ಮಾಡಿದ್ದೆ. ಅಲ್ಲಿಗೆ ಮಂಜೂರಾಗಿಲ್ಲ. ೬–೭ ತಿಂಗಳಿನಿಂದ ಅಲ್ಲಿಗೆ ಹಾಲೂ ಸಪ್ಲೈ ಆಗಿಲ್ಲಾ. ಬ್ರೆಡ್ ಕೂಡ ಸಪ್ಲೈ ಆಗಿಲ್ಲಾ. ನಿಜವಾಗಿಯೂ ನೀವು ರೆಡಿ ಫುಡ್ ಕೊಡುತ್ತಿದ್ದೀರಾ ಅಥವಾ ಹಾಲನ್ನು ನಿಲ್ಲಿಸಿಬಿಟ್ಟು ಬೇರೆ ಇನ್ನೇನಾದರೂ ಕೊಡುವುದಕ್ಕೆ ಯೋಜನೆ ಮಾಡಿದಿರಾ, ಇದರ ಬಗ್ಗೆ ಸರ್ಕಾರದ ಸ್ಪಷ್ಟ ಉತ್ತರ ಏನು ಅಂತ ತಿಳಿಸಬೇಕು .

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಸದ್ಯಕ್ಕೆ ಆದೇ ರೀತಿಯಲ್ಲಿ ಮುಂದುವರೆಸಿಕೊಂಡು ಹೋಗಬೇಕೆನ್ನುವುದೇ ಸರ್ಕಾರದ ಯೋಜನೆ.ಆ ಗ್ರೋ ಕಾರ್ಪೊರೇಷನ್ನಿನವರು ೫ ಕಡೆಯಲ್ಲಿ ಈ ಎನರ್ಜಿ ಫುಡ್ ಅನ್ನು ತಯಾರು ಮಾಡುವುದಕ್ಕೆ ಫಾಕ್ಟರೀಸ್ ಅನ್ನು ಶುರು ಮಾಡಿದ್ದಾರೆ. ಮೈಸೂರು ಮತ್ತು ಬೆಳಗಾಂನಲ್ಲಿ ಮಾತ್ರ ಈಗಾಗಲೇ ಶುರು ಮಾಡಿದ್ದಾರೆ. ಆ ಎನರ್ಜಿಫುಡ್ ಅನ್ನು ಸರ್ಕಾರ ಖರೀದಿ ಮಾಡಬೇಕೇ ಎನ್ನುವ ವಿಚಾರ ಪರಿಶೀಲಿಸುತ್ತಿದೆ. ಅವರಿಂದ ಇದು ಎಷ್ಟರಮಟ್ಟಿಗೆ ಸಪ್ಲೈ ಆಗುತ್ತದೆ ಮತ್ತು ಈ ಬೇಕರಿಯನ್ನು ಅವರು ದೊಡ್ಡ ಪ್ರಮಾಣದಲ್ಲಿ ಸಪ್ಲೈ ಮಾಡುವುದಕ್ಕಾಗುತ್ತ ದೆಯೇ ಅನ್ನುವುದನ್ನು ನಾವು ನೋಡಬೇಕಾಗುತ್ತದೆ. ಇನ್ನು ಚಿತ್ರದುರ್ಗ ಮತ್ತು ರಾಯಚೂರಿನಲ್ಲಿ ಪ್ಲಾಂಟ್ ಸೆಟ್‌ಅಪ್ ಮಾಡುವುದಕ್ಕೆ ಸರ್ವೆ ಕೆಲಸ ನಡೆಯುತ್ತಾ ಇದೆ. ಬಳ್ಳಾರಿಯಲ್ಲಿ ಸಿವಿಲ್ ವರ್ಕ್ಸ್ ಕೆಲಸ ತೆಗೆದುಕೊಂಡಿದೆ. ಆದರೆ ಇದರಿಂದ ಎಷ್ಟರಮಟ್ಟಿಗೆ ಸಪ್ಲೈ ಆಗುತ್ತಾ ಇದೆ ಅನ್ನುವುದನ್ನು ಸರ್ಕಾರ ಪರಿಶೀಲನೆ ಮಾಡುತ್ತಾ ಇದೆ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಗಡೆ.– ಈವಾಗ ಇದರ ಬಗ್ಗೆ ತನಿಖೆ ವ್ಯವಸ್ಥೆ ಸರಿಯಾಗಿ ಇಲ್ಲದೇ ಇರುವುದರಿಂದ ಈ ಹಾಲು ಯಾವ ಡಿಗ್ರಿ ಪ್ರಮಾಣದಲ್ಲಿರಬೇಕೋ ಆ ಪ್ರಮಾಣದಲ್ಲಿಲ್ಲ. ಹಾಲಿಗೆ ಬದಲು ನೀರು ಕೊಡುತ್ತಾ ಇದ್ದಾರೆ. ಇದರ ಬಗ್ಗೆ ಬೇಕಾದಷ್ಟು ದೂರುಗಳು ಈಗಾಗಲೇ ಬಂದಿವೆ. ಬಿಡಿಓ ಕೂಡ ಸರಿಯಾಗಿ ತನಿಖೆ ಮಾಡುವುದಿಲ್ಲ. ಆದುದರಿಂದ ನಾನು ಕೇಳುವುದೇನೆಂದರೆ ಈ ಪೌಷ್ಟಿಕ ಆಹಾರ ಯೋಜನೆ ಬಗ್ಗೆ ಸರಿಯಾದ ತನಿಖಾ ವ್ಯವಸ್ಥೆ ಇಲ್ಲ. ಆ ಬಗ್ಗೆ ಮುಂದೆ ಏನು ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಿ ಅನ್ನುವುದನ್ನು ಹೇಳುತ್ತೀರಾ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈ ಯೋಜನೆಯನ್ನು ಕೇಂದ್ರ ಸರ್ಕಾರದವರು ಶುರು ಮಾಡಿದರು. ೧೯೭೫ರಲ್ಲಿ ರಾಜ್ಯ ಸರ್ಕಾರದವರು ಈ ಯೋಜನೆಯನ್ನು ವಹಿಸಿಕೊಂಡ ಮೇಲೆ ಆದೇ ಪ್ಯಾಟ್ರನ್‌ನಲ್ಲಿ ಇಂಪ್ಲಿಮೆಂಟೇಷನ್ ಮಾಡಿ ಮುಂದುವರೆಸುತ್ತಿದ್ದೇವೆ ಆದರೆ ಮುನಿಸಿಪಾಲಿಟಿಯವರು ಇದರ ಒಂದು ಜವಾಬ್ದಾರಿಯನ್ನು ತೆಗೆದುಕೊಂಡು ನಡೆಸಿಕೊಂಡು ಹೋಗಬೇಕು. ಹಳ್ಳಿಗಳಲ್ಲಿ ಬಿಡಿಓ ಅವರು ಇದರ ಪೂರ್ಣ ಇನ್‌ಛಾರ್ಜ್‌ನಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ. ಮೊದಲು ಈ ಒಂದು ಯೋಜನೆಗೆ ಇಬ್ಬರು ಮಾತ್ರ ಇನ್‌ಸ್ಪೆಕ್ಟರ್ ಇದ್ದರು. ಅದಕ್ಕೆ ಹೆಚ್ಚು ಜನ ಇನ್ಸ್‌ಪೆಕ್ಟರ್ಸ್, ಸ್ಟಾಫ್ ಇಲ್ಲದೇ ಇರುವ ಕಾರಣ ಅದು ಸರಿಯಾಗಿನಡೆಯುವುದೇ ತಡವಾಗುವುದಕ್ಕೆ ಕಾರಣವಾಯಿತು. ಮತ್ತೆ ಈಗ ಅದಕ್ಕೆ ಳಿ ಜನ ಇನ್‌ಸ್ಪೆಕ್ಟರ್ಸ್ ಪ್ರೊಸ್ಪೆಕ್ಟ್ ಅನ್ನು ಕ್ರಿಯೇಟ್ ಮಾಡಿ ಅವರನ್ನು ತೆಗೆದುಕೊಂಡಿದ್ದೇವೆ. ಇನ್ನು ಮೇಲೆ ಈ ಯೋಜನೆ ಒಳ್ಳೆಯ ರೀತಿಯಲ್ಲಿ ಯಶಸ್ವಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

Revision of Pay Scales in Cotton Mills in Davangere

795 SRI PAMPAPATHI (Davanagere).— Will the Minister for Labour be pleased to state.—

(a) whether the Karnataka State Cotton Mill workers have submitted representations to the administrative Body of the mills or proprietors to revise the wages ;

(b) whether the cotton mill workers executive committee has submitted advance notice to undergo workers strike on 16th March 1981 ?

SRI A. B. JAKANUR (Minister for Labour).—

(a) Yes.

(b) Yes.

ಶ್ರೀ ಪಂಪಾಪತಿ.— ಸ್ವಾಮಿ, ಇದರಲ್ಲಿ (ಎ)ಗೆ ಉತ್ತರವಾಗಿ ಹೌದು ಅಂತ ಹೇಳಿದ್ದೀರಿ. ಈ ಮುಷ್ಕರ ಮುಂದುವರೆಯುವುದಕ್ಕೆ ತಾವು ಏನು ಕ್ರಮ ಕೈಗೊಂಡಿದ್ದೀರಿ ಸ್ವಾಮಿ ?

ಶ್ರೀ ಎ. ಬಿ. ಜಕನೂರು.— ಇದರ ಬಗ್ಗೆ ಕನ್ಸಿಲಿಯೇಷನ್ ನಡೆಯುತ್ತಾ ಇದೆ. ಇದನ್ನು ಮುಂದೂಡಿದ್ದಾರೆ. ಲೇಬರ್ ಕಮಿಷನರ್‌ರವರ ಹೇಳಿಕೆ ಪ್ರಕಾರ ಅವರು ತಮ್ಮ ಮುಷ್ಕರವನ್ನು ಹಿಂತೆಗೆದುಕೊಂಡಿದ್ದಾರೆ. ಇದು ಮುಂದುವರೆಯದೇ ಇದ್ದಹಾಗೆ ತಾತ್ಕಾಲಿಕವಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ಇದರ ಬಗ್ಗೆ ಮಾತುಕತೆ ನಡೆದು ಒಂದು ತೀರ್ಮಾನಕ್ಕೆ ಬಂದಿದ್ದರಿಂದ ಇದರಲ್ಲಿ ಆ ಕಾರ್ಮಿಕರಿಗೆ ಏನೋ ಒಂದು ಆಶ್ವಾಸನೆ ಸಿಕ್ಕಿದೆ. ತಾವು ಈ ಬಗ್ಗೆ ಏನು ಮಾಡುತ್ತೀರಿ ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎ. ಬಿ. ಜಕನೂರು.—ಇದರಲ್ಲಿ ಆಶ್ವಾಸನೆ ಪ್ರಶ್ನೆ ಬರುವುದಿಲ್ಲ. ಇದರ ಬಗ್ಗೆ ಕನ್ಸಿಲಿಯೇಷನ್ ನಡೆಯುತ್ತಾ ಇದೆ. ಈ ಬಗ್ಗೆ ಸರ್ಕಾರ ಪರಿಶೀಲಿಸುವುದಕ್ಕೆ ಮಂತ್ರಿ ತಿಂಗಳೇ ತಾರೀಖಿಗೆ ಎರಡೂ ಪಕ್ಷಗಳ ಒಂದು ಮೀಟಿಂಗ್ ಅನ್ನು ಕರೆದಿದ್ದೇವೆ. ಆದರಲ್ಲಿ ಅವರ ವೇತನ ಹೆಚ್ಚು ಮಾಡುವ ಪ್ರಶ್ನೆ ಬರುತ್ತದೆ. ಆವಾಗ ಆ ಬಗ್ಗೆ ಏನಾದರೂ ಒಂದು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಂಪಾಪತಿ.— ಸ್ವಾಮಿ, ಈಗ ಇದರಲ್ಲಿರುವ ಪ್ರಶ್ನೆ ಇಷ್ಟೆ. ಅದೇನೆಂದರೆ ಕರ್ನಾಟಕ ರಾಜ್ಯದಲ್ಲಿ ಹತ್ತಿ ಗಿರಣಿ ಕಾರ್ಮಿಕರ ಕೆಲಸ ಮಂತ್ರ ಆಕ್ಕಪಕ್ಕದಲ್ಲಿ ಇರತಕ್ಕಂಥಾ ಹತ್ತಿ ಗಿರಣಿ ಕಾರ್ಮಿಕರ ಕೆಲಸ ಎರಡೂ ಒಂದೇ. ಆದರಲ್ಲಿ ಏನೂ ವ್ಯತ್ಯಾಸ ಇಲ್ಲ. ಆದರೆ ಅಲ್ಲಿ ಕೊಡತಕ್ಕಂಥಾ ವೇತನಕ್ಕೂ